<u>ದಿ:**06.09.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು</u>:- ಆರೋಪಿ ಪರ K.C., ವಕೀಲರಿಂದಃ-

ನಾನು ಆರೋಪಿಯಿಂದ ಕರ್ನಾಟಕ ಬ್ಯಾಂಕ್ ನ ಚೆಕ್ ಅನ್ನುಪಡೆದುಕೊಂಡಿರುತ್ತೇನೆ . ಅದರ ನಂಬರ್ ಹೇಳಲಾಗುವುದಿಲ್ಲ . ನಿಪಿ **1** ಚೆಕ್ ಜಗಳೂರು ಬ್ರಾಂಚ್ ನದ್ದು ಇರುತ್ತದೆ . ನಾನು ಆರೋಪಿ ದಿಃ **25.07.2020** ರಂದು **13** ಲಕ್ಷ ಹಣವನ್ನು ನೀಡಿರುತ್ತೇನೆ . ಆದೇ ದಿನ ನಾನು ನಿಪಿ **1** ಚೆಕ್ ಅನ್ನು ಪಡೆದುಕೊಂಡಿರುತ್ತೇನೆ . ಸದರಿ ವಿಚಾರವನ್ನು ನನ್ನ ಪಿರ್ಯಾದು ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಹೆಚ್ಚಿನ ಮೊತ್ತದ ಸಾಲದ ವ್ಯವಹಾರಗಳಲ್ಲಿ ಭದ್ರತೆಗೆ ನೀಡುವ ದಾಖಲೆಗಳಲ್ಲಿ ಹಣ ಪಡೆದ ದಿನವನ್ನು ನಮೂದಿಸಿ ನೀಡುತ್ತಾರೆ ಎಂದರೆ ಸರಿ . ಆರೋಪಿಯ ನನಗೆ **5** ತಿಂಗಳು **4** ದಿನದ ಕಾಲದ ದಿನವನ್ನು ನಮೂದಿಸಿ ನನಗೆ ನಿಪಿ **1** ಚೆಕ್ ಅನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ವ್ಯವಹಾರ ನಡೆದ ದಿನದಂದೇ ಭದ್ರತೆಗಾಗಿ ನೀಡುವ ದಾಖಲೆಗಳಲ್ಲಿ ಅದೇ ದಿನ ನಮಾದಿಸಿ ನೀಡುತ್ತಾರೆ ಎಂದರೆ ಸರಿ . ಸಾಮಾನ್ಯವಾಗಿ ಭದ್ರತೆಗೆ ನೀಡಿದ ದಾಖಲೆಗಳನ್ನು ಹಣ ಪಡೆದುಕೊಳ್ಳಲು **2 -3** ದಿನದ ನಂತರ ಬ್ಯಾಂಕ್ ಗೆ ನಗಧಿಕರಣಕ್ಕೆ ಸಲ್ಲಿಸುತ್ತಾರೆ ಎಂದರೆ ಸರಿ. ನಾನು ನಿಪಿ **1** ಚೆಕ್ ಅನ್ನು ನಗದೀಕರಣಕ್ಕೆ ದಿಃ **29.12.2020** ರಂದು ಜಮೆ ಮಾಡಿರುತ್ತೇನೆ . ನನಗೆ ನಿಪಿ **3** ನೋಟೀಸ್ **,** ಪಿರ್ಯಾದು ಮತ್ತು ಮುಖ್ಯ ವಿಚಾರಣೆಯ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿ. ನನಗೆ ನ್ಯಾಯಾಲಯದಲ್ಲಿ ಪಿರ್ಯಾದಿಯ ಲಗತ್ತಾಗಿ ಯಾವ ದಾಖಲೆಗಳನ್ನು ಸಲ್ಲಿಸಿರುವ ಬಗ್ಗೆ ಮಾಹಿತಿ ಇರುತ್ತದೆ . ನನಗೆ **SBI** ಬ್ಯಾಂಕ್ ನಲ್ಲಿ ಖಾತೆ ಇರುತ್ತದೆ . ನಾನು ದಿಃ **10.03.2021** ರಂದು ಬ್ಯಾಂಕಿಗೆ ನಗಧೀಕರಣಕ್ಕೆ ಸಲ್ಲಿಸಿರುತ್ತೇನೆ . ನಾನು ಸದರಿ ದಿನಾಂಕದಂದು ನಿಪಿ **1** ಚೆಕ್ ಅನ್ನು ನಗಧಿಕರಣಕ್ಕೆ ಸಲ್ಲಿಸಿರುವುದನ್ನು ತೋರಿಸಲು ನಿಪಿ **2** ಬ್ಯಾಂಕ್ ಮೆಮೋ ಸಲ್ಲಿಸಿರುತ್ತೇನೆ . ನಿಪಿ **2** ರಲ್ಲಿ ದಿಃ **10.03.2021** ಎಂದು ನಮೂದು ಇರುವುದಿಲ್ಲ ಎಂದರೆ ಸರಿ . ನಾನು ಸದರಿ ದಿನದಂದು ಚೆಕ್ ಅನ್ನು ನಗಧಿಕರಣಕ್ಕೆ ಸಲ್ಲಿಸಲು ತೋರಿಸಲು ನ್ಯಾಯಾಲಯಕ್ಕೆ

ಯಾವುದೇ ದಾಖಲೆಯನ್ನು ಹಾಜರುಪಡಿಸದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಾನು ನಿಪಿ **1** ಚೆಕ್ ವಾಪಸ್ಸಾದ ನಂತರ ದಿಃ **12.03.2021** ನಿಪಿ **3** ರಂತೆ ನೋಟೀಸ್ ಅನ್ನು ನೀಡಿರುತ್ತೇನೆ **.** ನಿಪಿ **3** ನೋಟೀಸ ನಲ್ಲಿ**,** ಫಿರ್ಯಾದಿನಲ್ಲಿ ಮತ್ತು ಮುಖ್ಯವಿಚಾರಣೆ ಪ್ರಮಾಣಪತ್ರದಲ್ಲಿ ದಿಃ **10.03.2021** ರಂದು ನಿಪಿ **1** ವಾಪಸ್ಸಾದ ಬಗ್ಗೆ ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನಗೆ ಆರೋಪಿಗೆ **13** ಲಕ್ಷ ಹಣ ನೀಡಲು ಸಾಮರ್ಥ್ಯ ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ **13** ಲಕ್ಷ ಹಣ ನೀಡಲು ಸಾಮರ್ಥ್ಯ ಇಲ್ಲದಿದ್ದರು ಸಹ ನಾನು ನಿಪಿ **1** ನಮ್ಮ ಖಾತೆಗೆ ಜಮೆ ಮಾಡಿಸಿ ಸುಳ್ಳು ನೋಟೀಸ್ ನೀಡಿ ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನಾನು ಸಂಬಂಧಿಕರ ಅವರು ನಮ್ಮ ಮನೆಗೆ ಬಂದು ಹೋಗಿ ಮಾಡುತ್ತೇವೆ ಎಂದರೆ ಸರಿ. ಆರೋಪಿ ತನ್ನ ಮನೆ ಕಟ್ಟಲು , ಬ್ಯಾಂಕಿನಲ್ಲಿ ಸಾಲ ಮಾಡಲು ಚೆಕ್ ಬುಕ್ ಅನ್ನು ಪಡೆದುಕೊಂಡಿರುತ್ತಾನೆ ಎಂದರೆ ಸರಿ. ಆರೋಪಿ ಸಹಿ ಮಾಡಿದ ಖಾಲಿ ಚೆಕ್ ಅನ್ನು ನಾನು ಆರೋಪಿ ಮನೆಗೆ ಹೋದಾಗ ತೆಗೆದುಕೊಂಡು ದುರ್ಬಳಕೆ ಮಾಡಿಕೊಂಡು ಈ ಸುಳ್ಳು ಫಿರ್ಯಾದನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ಯಾವುದೇ ಹಣವನ್ನು ಪಡೆಯದೇ ಇದ್ದರೂ ಸಹ ನಾನು ಸುಳ್ಳು ದಾಖಲೆ ಸೃಷ್ಠಿಸಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ಮಧ್ಯೆ ಸಂಬಂದ ಬಿಟ್ಟರೆ ಯಾವುದೇ ಹಣಕಾಸಿನ ವ್ಯವಹಾರ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ಯಾವುದೇ ಹಣಪಡೆದುಕೊಳ್ಳದೇ ಇದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ 13 ಲಕ್ಷ ನೀಡಲು ಬಾದ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ಈ ಪ್ರಕರಣವು ವಜಾ ಆಗಬೇಕಾಗದ ಪ್ರಕರಣ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ರೀತಿಯು ಅಪರಾಧ ಮಾಡಿರುವುದಿಲ್ಲ . ಆತ ಯಾವುದೇ ಶಿಕ್ಷೆಗೆ ಭಾದ್ಯಸ್ಥ ಇರುವುದಿಲ್ಲ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು